(ಶ್ರೀ ಬಿ. ಬೈರಪ್ಪಾಜಿ)

ಕಾಲಾತೀತವಾಗಿ ಬಾಕಿ ನಿಂತಿರುವ ಕಂತುಗಳ ಮೇಲೆ ನುಸ್ತಿ ಬಡ್ಡಿಯನ್ನು ಹಾಕುತ್ತಾರೆ. ಯಾವ ಅಧಿಕಾರಿಗಳು ರೈತರಿಗೆ ಸಾಲವನ್ನು ಮಂಜೂರು ಮಾಡಿ ಅದನ್ನು ರೈತನಿಗೆ ಪಾವತಿ ಮಾಡುತ್ತಾರೆಯೋ ಅವರು ಅದರ ವಸೂಲಾತಿಯ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಹೀಗಿರುವಾಗ ರೈತರಿಗೆ ಯಾವ ವಿಧದಲ್ಲಿಯೂ ಸಂಬಂಧ ಇಲ್ಲದೆ ಇರತಕ್ಕ ಅಧಿಕಾರಿಗಳು ಆ ಸಾಲದ ವಸೂಲಾತಿಯ ಬಗ್ಗೆ ರೈತರಿಗೆ ತೊಂದರೆಯನ್ನು ಕೊಡುತ್ತಿದ್ದಾರೆ. ಇಂಥಾ ಸಂದರ್ಭಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಅಂಥಾ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೀರಾ, ಮತ್ತು ರೈತನಿಗೆ ವಿಧಿಸಿರತಕ್ಕ ನುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ರೈತ ಸಾಲ ತೆಗೆದುಕೊಳ್ಳುವಾಗ ವರ್ಷಕ್ಕೆ ಎಷ್ಟು ಕೊಡಬೇಕು, ಯಾವ ರೇಟ್ ಪ್ರಕಾರ ಕೊಡಬೇಕು ಮತ್ತು ಎಷ್ಟು ಕಂತಿನ ಪ್ರಕಾರ ಸರ್ಕಾರಕ್ಕೆ ಜಮಾ ಮಾಡ ಬಹುದು ಎಂಬುದನ್ನೆಲ್ಲಾ ಯೋಚನೆ ಮಾಡಿಯೇ ತೆಗೆದುಕೊಂಡಿರುತ್ತಾನೆ. ಆದ್ದರಿಂದ ನುಸ್ತಿ ಬಡ್ಡಿ ಕೊಡಬೇಕಾದ ಸಂದರ್ಭ ಬರುವುದಿಲ್ಲ.

Siddapura Project.

*Q.—138. Sri MAHANTA SWAMY (Shahapur).—

Will the Government be pleased to state :—

(*a*) when the Siddapura Project work would be started ;
(*b*) the estimated cost of the same ;
(*c*) the number of acres that would be irrigated under this project;
(*d*) the number of villages that would come under submersion ?

A.—Sri S. NIJALINGAPPA (Chief Minister).—

(*a*) As soon as the Planning Commission approves the revised proposal.
(*b*) Rs. 48.3 crores.
(*c*) 6,50,000 acres.
(*d*) 59.

ಶ್ರೀ ಮಹಾಂತಸ್ವಾಮಿ.—ಯೋಜನಾ ಆಯೋಗದವರು ಮಾರ್ಪಾಟಾದ ಯೋಜನೆಯನ್ನು ಅನುಮೋದಿಸಿದ ಕೂಡಲೇ ಪ್ರಾರಂಭಿಸುತ್ತೀವೆ ಎಂದು ಹೇಳುತ್ತಾ ಇದ್ದೀರಿ. ಇದಕ್ಕೆ ಏನಾದರೂ ಅಡ್ಡಿ ಆತಂಕ ಇದೆಯೇ ಅಥವಾ ಇದರಲ್ಲಿ ಏನಾದರೂ ರಾಜಕೀಯ ಇದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇದರಲ್ಲಿ ರಾಜಕೀಯದ ಗಂಧ ಎಳ್ಳಷ್ಟೂ ಇಲ್ಲ. ತಜ್ಞರು ವಿಚಾರ ಮಾಡಿ ತಿಳಿಸಬೇಕಾಗಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ನಾರಾಯಣಪುರದಲ್ಲಿ ಈ ಪ್ರಾಜೆಕ್ಟನ್ನು ಶುರು ಮಾಡುವಾಗ ಪ್ಲಾನಿಂಗ್ ಕಮಿಷನ್‌ನವರು ಮಂಜೂರಾತಿ ಕೊಟ್ಟಿದ್ದರೆ ? ಹಂಗಿದ್ದ ಪಕ್ಷದಲ್ಲಿ ಈಗ ಬದಲಾವಣೆ ಮಾಡುವುದಕ್ಕೆ ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಅಲ್ಲಿಗೆ ಬಂದು ಪೊಕ್ಕಾ ನೋಡಿದ ಮೇಲೆ ಸಂಬಂಧಪಟ್ಟ ಮಂತ್ರಿಗಳು ದೊಡ್ಡ ಇಂಜನಿಯರು ಅವರು ಈಗ ಮಾಡಿರುವುದು ಸರಿ ಎಂದು ಹೇಳಿ ಸಿದ್ದಾಪುರದಲ್ಲಿ ಪ್ರಾಜೆಕ್ಟ್ ಮಾಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಅದನ್ನು ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಪ್ಲಾನಿಂಗ್ ಕಮಿಷನ್‌ನವರು ನಾರಾಯಣಪುರದಲ್ಲಿ ಪ್ರಾಜೆಕ್ಟ್ ಆಗಬೇಕೆಂದು ಮಂಜೂರಾತಿ ಕೊಟ್ಟಿದ್ದರೇ ಹೇಗೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಆಗಬಹುದು ಎಂದು ಅಭಿಪ್ರಾಯಪಟ್ಟಿದ್ದರು ಅದರಂತೆ ಕೆಲಸ ನಡೆಯಬೇಕೆಂದು ಇತ್ತು. ಆದರೆ ಅವರು ಪೊಕ್ಕಾ ಬಂದು ನೋಡಿದಮೇಲೆ 6 ಕೋಟಿ ರೂಪಾಯಿ ಉಳಿತಾಯವಾಗುತ್ತದೆ ಮತ್ತು ಅಷ್ಟೇ ಜಮೀನು ನಾಗುವಳಿಯಾಗುತ್ತದೆ ಎಂದು ಹೇಳಿದ್ದರ ಮೇಲೆ ಅದನ್ನು ಬದಲಾಯಿಸಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಸಿದ್ದಾಪುರದಲ್ಲಿ ಕಟ್ಟುವುದರಿಂದ—ನಾರಾಯಣಪುರದಲ್ಲಿ ಎಷ್ಟು ನೀರನ್ನು ಇಂಪೌಂಡ್ ಮಾಡಬಹುದೋ ಅದಕ್ಕಿಂತಲೂ ಹೆಚ್ಚು ನೀರನ್ನು ಇಂಪೌಂಡ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ನಾರಾಯಣಪುರದ ಮತ್ತು ಸಿದ್ದಾಪುರದ ಪ್ರಾಜೆಕ್ಟ್‌ನ ಮಟ್ಟ ಎಷ್ಟು ಎಂಬುದು ಮಾನ್ಯಸದಸ್ಯರಿಗೆ ಗೊತ್ತಿದೆ.

ಶ್ರೀ ಆರ್. ಎಸ್. ಪಾಟೀಲ್.—6 ಕೋಟಿ ರೂಪಾಯಿ ಉಳಿತಾಯವಾಗುತ್ತದೆ ಎಂದು ಹೇಳಿದಿರಿ, ಇದು ಎಷ್ಟು ಕಾಲದಲ್ಲಿ ಆಗುತ್ತದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಎಸ್. ಎಂ. ಕೃಷ್ಣ.—ಈ ದೇಶದಲ್ಲಿ ಯುದ್ಧವಾಗಿರತಕ್ಕ ತುರ್ತುಪರಿಸ್ಥಿತಿಯ ದೆಶೆಯಿಂದ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿರತಕ್ಕ ಹಲವಾರು ಭಾರಿ ನೀರಾವರಿ ಯೋಜನೆಗಳನ್ನು ಸದ್ಯಕ್ಕೆ ಕೈ ಬಿಡಬೇಕೆನ್ನತಕ್ಕ ಅಭಿಪ್ರಾಯ ಕೇಂದ್ರಸರ್ಕಾರಕ್ಕಾಗಲಿ ಅಥವಾ ಯೋಜನಾ ಕಮಿಷನ್ ಅವರಿಗಾಗಲಿ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲಿಯವರೆಗೂ ಬಂದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಪ್ಲಾನಿಂಗ್ ಕಮಿಷನ್ ಅವರು ಮುಂಜೂರಾತಿ ಕೊಡಬಹುದು ಎಂದು ಹೇಳಿ ನಾರಾಯಣಪುರದಲ್ಲಿ ಕೆಲಸ ಶುರು ಮಾಡಬೇಕು ಎಂದು ಹೇಳಿ ಹಣವನ್ನೂ ಕೂಡ ತೆಗೆದಿಟ್ಟಮೇಲೆ ಪ್ಲಾನಿಂಗ್ ಕಮೀಷನ್ ಮೆಂಬರ್ ಆದವರು ದೊಡ್ಡ ಇಂಜನಿಯರಾಗಿ ಸಿದ್ದಾಪುರದಲ್ಲಿ ಮಾಡಬೇಕೆಂದು ಮಾಡಿದ್ದಾರೆ. ಈ ಕೆಲಸ ತೆಗೆದುಕೊಳ್ಳಲಿಕ್ಕೆ ಯಾವ ಆತಂಕ ಇದೆ ?

ಶ್ರೀ ಎಸ್. ನಿಜಲಿಂಗಪ್ಪ.—ತಜ್ಞರು ನೋಡಿ ಪರೀಕ್ಷೆ ಮಾಡಿ ಯಾವುದು ಸರಿ ಎಂಬುದನ್ನು ಹೇಳುತ್ತಾರೆ. ಅದು ಸಾಧಾರಣವಾಗಿ ಇರತಕ್ಕ ಪದ್ಧತಿ, ಅದನ್ನನುಸರಿಸಿ ಕೆಲಸ ಮಾಡಬೇಕಾಗುತ್ತದೆ. ಈಗ ಮುಂಜೂರಾಗಿರತಕ್ಕ ಕೆಲಸ ತೆಗೆದುಕೊಳ್ಳಲಿಕ್ಕೆ ಸ್ವಲ್ಪ ತಡ ಆಗಿದೆ.

Minerals available in Krishnarajpet Taluk

.*Q.—65. Sri N. NANJE GOWDA (Krishnarajpet).—

Will the Government be pleased to state :—

(*a*) the Minerals that are available in Bellibettada Kavalu, Hemagiri, Siddalakallu, Bellibetta in Krishnarajapet Taluk ;

(*b*) the names of minerals and the quantity available in these places ;

(*c*) whether they have taken any action to utilise these minerals ?

A.—Sri MAQSOOD ALI KHAN (Deputy Minister for Mines and Geology).—

(*a*) No mineral of any commercial value has been reported in the areas comprising these villages, though stray occurrences of kyanite, corundum, soapstone and traces of gold are found.

(*b*) The names of minerals that occur are mentioned under reply to clause (*a*) above. As for quantities, none of the above minerals occur in abundance and are not considered worthy of economic exploitation.

(*c*) No action is called for in the matter of utilisation of these minerals for reasons stated in reply to clause (*b*) above.

ಶ್ರೀ ಎನ್. ನಂಜೇಗೌಡ.—ಈ ಖನಿಜಗಳನ್ನು ಎಷ್ಟನೇ ಇಸವಿಯಲ್ಲಿ ಸರ್ವೆ ಮಾಡಲಾಯಿತು ?

Sri MAQSOOD ALI KHAN.—In 1924.

ಶ್ರೀ ಎನ್. ನಂಜೇಗೌಡ.—1924 ನೇ ಇಸವಿಯಲ್ಲಿ ಸರ್ವೇ ಮಾಡಿದ ನಂತರ ಮತ್ತೆ, ಪುನಃ ಈಗ ಸರ್ವೆ ಮಾಡಿಲ್ಲ ಅಲ್ಲವೇ ?